ದಿನಾಂಕಃ 11–11–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ– 2 ನೇ ಎದುರುದಾರರ ಪರವಾಗಿ ಶ್ರೀಮತಿ ಜೆ.ಬಿ. ವಕೀಲರಿಂದಃ–**

ಈ ಕೇಸಿನಲ್ಲಿ ಸಾಕ್ಷ್ಯ ನುಡಿಯಲು ನಮ್ಮ ಇಲಾಖಾವತಿಯಿಂದ ನೀಡಲಾದ ಅಧಿಕಾರ ಪತ್ರವನ್ನು ನಿಆರ್.1 ಎಂದು ಗುರುತಿಸಲಾಯಿತು.

ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ– ಅರ್ಜಿದಾರರ ಪರವಾಗಿ ಶ್ರೀ.ಎನ್.ಎನ್.ಆರ್. ವಕೀಲರಿಂದಃ–**

ಆ ದಿನ ಆ ಕೆ.ಎಸ್.ಆರ್.ಟಿ.ಸಿ. ಬಸ್ ನಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆ ದಿನ ಸಾದರಹಳ್ಳಿ ಗೇಟ್ ಬಳಿ ನಮ್ಮ ಬಸ್ ನಿಂದ ಒಂದು ಅಪಘಾತವಾಗಿರುತ್ತದೆ. ಅಪಘಾತವಾದ ಸ್ಥಳ ಸಾದರಹಳ್ಳಿ ಗೇಟ್ ನಿಂದ ಹೊಸಕೆರೆ, ಮುದ್ದೇನಹಳ್ಳಿಗೆ ಹೋಗುವ ರಸ್ತೆಯಾಗಿರುತ್ತದೆ. ಆ ದಿನ ಮೃತ ನಾಗರಾಜುರವರು ತಾನು ಪಿ.ಡಿ.ಓ. ಆಗಿ ದೊಡ್ಡಅಗ್ರಹಾರದಿಂದ ಕೆಲಸ ಮುಗಿಸಿಕೊಂಡು ವಾಪಸ್ಸು ಮನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ. ಆತ ಚಲಾಯಿಸುತ್ತಿದ್ದ ಬೈಕ್ ನಂ.ಕೆಎ–64–ಯು–1270 ಆಗಿತ್ತು ಎಂದರೆ ಸರಿ. ಆ ದಿನ ನಾನು ಕೆ.ಎಸ್.ಆರ್.ಟಿ.ಸಿ. ಬಸ್ಸನ್ನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ನಿಧಾನವಾಗಿ ಬರುತ್ತಿದ್ದ ಮೃತ ನಾಗರಾಜುರವರ ಬೈಕಿಗೆ ಡಿಕ್ಕಿಪಡಿಸಿದೆನು

ಎಂದರೆ ಸರಿಯಲ್ಲ. ನಾನು ಮೃತ ನಾಗರಾಜುರವರಿಗೆ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ